## ಸ್ವಚ್ಛ ಭಾರತದ ಪ್ರತಿಜ್ಞೆ

- ಮಹಾತ್ಮ ಗಾಂಧೀಜಿಯವರು ಭಾರತವು ಸ್ವತಂತ್ರ ದೇಶವಾಗುವುದರ ಜೊತೆಗೆ, ಸ್ವಚ್ಛ ಮತ್ತು ಅಭಿವೃದ್ಧಿಶೀಲ ದೇಶವಾಗಬೇಕೆಂದು ಕನಸು ಕಂಡಿದ್ದರು.
- ಮಹಾತ್ಮ ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು.
- ಭಾರತಾಂಬೆಯ ಸೇವೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಅದಕ್ಕಾಗಿ ದೇಶವನ್ನು ಅಚ್ಚುಕಟ್ಟಾಗಿ ಮತ್ತು ಸ್ವಚ್ಛವಾಗಿಡಬೇಕಾಗಿದೆ.
- ನಾನು ಸ್ವಚ್ಛತೆಗಾಗಿ ಬದ್ಧತೆ ಹಾಗೂ ಸಮಯವನ್ನು ಮೀಸಲಿಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇನೆ.
- ವರ್ಷಕ್ಕೆ 100 ಗಂಟೆಗಳನ್ನು ಅಂದರೆ ಪ್ರತಿ ವಾರದಲ್ಲಿ ಎರಡು ಗಂಟೆಗಳನ್ನು ಸ್ವಯಂ ಪ್ರೇರಣೆಯಿಂದ ಸ್ವಚ್ಛತೆಗಾಗಿ ವಿನಿಯೋಗಿಸುತ್ತೇನೆ.
- ನಾನು ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದಿಲ್ಲ ಹಾಗೂ ಇತರರು ಕಸವನ್ನು ಎಲ್ಲೆಂದರಲ್ಲಿ ಬಿಸಾಡಲು ಬಿಡುವುದಿಲ್ಲ.
- ನಾನು ನನಗಾಗಿ, ನನ್ನ ಕುಟುಂಬ, ನನ್ನ ಪ್ರದೇಶ, ನನ್ನ ಗ್ರಾಮ ಮತ್ತು ನನ್ನ ಕಾರ್ಯ ಸ್ಥಳದಲ್ಲಿ ಸ್ವಚ್ಛತೆಯ ಅನ್ವೇಷಣೆಯನ್ನು ಆರಂಭಿಸುತ್ತೇನೆ.
- ನಾನು ಜಗತ್ತಿನ ಇತರೆ ದೇಶಗಳು ಸ್ವಚ್ಛವಾಗಿ ಕಂಡು ಬರಲು ಕಾರಣ ಅಲ್ಲಿನ ನಾಗರಿಕರು ಕಸವನ್ನು ಬಿಸಾಡುವುದಿಲ್ಲ ಅಥವಾ ಕಸವನ್ನು ಬಿಸಾಡಲು ಬಿಡುವುದಿಲ್ಲ ಎಂದು ನಂಬಿರುತ್ತೇನೆ.
- ಈ ದೃಢ ನಂಬಿಕೆಯೊಂದಿಗೆ, "ಸ್ವಚ್ಛ ಭಾರತ ಮಿಷನ್" ಸಂದೇಶವನ್ನು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಪ್ರಸರಿಸುತ್ತೇನೆ.
- ಈ ದಿನ ನಾನು ತೆಗೆದುಕೊಳ್ಳುತ್ತಿರುವ ಪ್ರತಿಜ್ಞೆಯನ್ನು ಇತರೆ 100 ಜನರು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸುತ್ತೇನೆ.
- ಸ್ವಚ್ಛತೆಗಾಗಿ ಇತರರು ವರ್ಷದಲ್ಲಿ 100 ಗಂಟೆಗಳನ್ನು ವಿನಿಯೋಗಿಸುವಂತೆ ನಾನು ಪ್ರೇರೆಪಿಸುತ್ತೇನೆ.
- ಸ್ವಚ್ಛತೆಗಾಗಿ ತೆಗೆದುಕೊಳ್ಳುವ ಪ್ರತಿ ಹೆಜ್ಜೆಯು ನನ್ನ ದೇಶವನ್ನು ಸ್ವಚ್ಛವಾಗಿಡಲು ಸಹಕಾರಿಯಾಗುವುದೆಂದು ನಾನು ವಿಶ್ವಾಸ ಹೊಂದಿರುತ್ತೇನೆ.